ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೧

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೇಳನೇ ಅಧಿವೇಶನ**
**(ಮುಂದುವರೆದ ಉಪವೇಶನ)**
**ಮಂಗಳವಾರ, ದಿನಾಂಕ: ೧೭ನೇ ಮಾರ್ಚ್, ೨೦೧೫**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ರೈತರ ಜಮೀನುಗಳಿಗೆ ಸೋಲಾರ್ ಪಂಪ್‌ಸೆಟ್ ಅಳವಡಿಕೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೫೧ (೧೫೯೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನವೀಕರಿಸಿದ ಇಂಧನವನ್ನು (Renewable Energy) ಹೆಚ್ಚಾಗಿ ಬಳಸುವ ಉದ್ದೇಶದಿಂದ, ರಾಜ್ಯದ ರೈತರ ಜಮೀನುಗಳಿಗೆ ಸೋಲಾರ್ ಪಂಪ್‌ಸೆಟ್ ಅಳವಡಿಸುವ ಸಂಬಂಧ ಜವಾಹರಲಾಲ್ ನೆಹರು ನ್ಯಾಷನಲ್ ಸೋಲಾರ್ ಮಿಷನ್ ಯೋಜನೆ ಇರುವುದು ನಿಜವೇ ; ಇದ್ದಲ್ಲಿ, ಈ ಕುರಿತು ವಿವರ ನೀಡುವುದು ;

(ಆ) ಇದು ಕರ್ನಾಟಕದಲ್ಲಿ ಯಾವ ವರ್ಷ ಪ್ರಾರಂಭವಾಯಿತು ;

(ಇ) ಈ ಯೋಜನೆಯಡಿಯಲ್ಲಿ ಯಾವ ಯಾವ ವರ್ಷದಲ್ಲಿ ಎಷ್ಟು ಹಣ ಮೀಸಲಿಡಲಾಗಿದೆ ;

(ಈ) ಈ ಯೋಜನೆಯಡಿಯಲ್ಲಿ ಎಷ್ಟು ಜನ ರೈತರ ಹೊಲಗದ್ದೆಗಳಲ್ಲಿ ಸೋಲಾರ್ ಪಂಪ್‌ಸೆಟ್ ಅಳವಡಿಸಲಾಗಿದೆ ?

## ಪವನ ವಿದ್ಯುತ್ ಯಂತ್ರಗಳ ಅಳವಡಿಕೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೧೫೨ (೧೫೭೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಯಾವ ಯಾವ ಕಂಪನಿಯವರು ಪವನ ವಿದ್ಯುತ್ ಯಂತ್ರಗಳನ್ನು ಅಳವಡಿಸುತ್ತಿದ್ದಾರೆ ; (ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ಒದಗಿಸುವುದು)

(ಆ) ಆ ಪೈಕಿ ಪರವಾನಗಿ ಪಡೆದಿರುವ ಕಂಪನಿಗಳ ಸಂಖ್ಯೆ ಎಷ್ಟು ; ಪಡೆಯದಿರುವ ಕಂಪನಿಗಳ ಸಂಖ್ಯೆ ಎಷ್ಟು ;

(ಇ) ಪರವಾನಗಿ ಪಡೆಯದೇ ಯಂತ್ರಗಳನ್ನು ಅಳವಡಿಸುತ್ತಿರುವ ಕಂಪನಿಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರ ನೀಡುವುದು)

(ಈ) ಪರವಾನಗಿ ಪಡೆಯದೇ ಯಂತ್ರಗಳನ್ನು ಅಳವಡಿಸಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ ; ಬಂದಿದ್ದರೆ, ಅದರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಉ) ಯಂತ್ರಗಳು ಅಳವಡಿಸಿದ ಜಮೀನಿನ ಮಾಲೀಕರಿಗೆ ಸರಿಯಾದ ಹಣ ಕೊಟ್ಟಿರುವುದಿಲ್ಲವೆಂದು ದೂರುಗಳು ಬಂದಿದೆಯೇ ;

(ಊ) ಈ ಯಂತ್ರಗಳು ಪರಿಸರಕ್ಕೆ ಮಾರಕವೇ ?

## ಸಿಂಧಗಿ ಪುರಸಭೆ ವತಿಯಿಂದ ಶವ ವಾಹನ ಒದಗಿಸುವ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೫೩ (೧೫೪೯) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿಂಧಗಿ ಪುರಸಭೆಯ ವತಿಯಿಂದ ಶವ ವಾಹನ ಒದಗಿಸಬೇಕೆಂಬ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಶವ ವಾಹನದ ಬೇಡಿಕೆ ತೀವ್ರವಾಗಿದ್ದು, ಇದನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮ ಏನು ;

(ಇ) ಕಳೆದ ಒಂದು ವರ್ಷದಲ್ಲಿ ಪುರಸಭೆಯಿಂದ ಯಾವ ಯಾವ ಕಾರ್ಯಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ ? (ಪ್ರತಿಯೊಂದು ವೆಚ್ಚದ ವಿವರ ನೀಡುವುದು)

## ತುಂಡುಗುತ್ತಿಗೆ ಕಾಮಗಾರಿಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೫೪ (೧೬೨೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಲೋಕೋಪಯೋಗಿ ವಿಭಾಗಗಳಲ್ಲಿ ಕಳೆದ ೧ ವರ್ಷದಿಂದ ೩೦೫೪ ಮತ್ತು ೫೦೫೪ ಲೆಕ್ಕಶೀರ್ಷಿಕೆಗಳಡಿ (ಯೋಜನೆ / ಯೋಜನೇತರ) ಎಷ್ಟು ತುಂಡು ಗುತ್ತಿಗೆ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ಸಲ್ಲಿಸುವುದು)

(ಆ) ಸದರಿ ಕಾಮಗಾರಿಗಳ ಮೊತ್ತವೆಷ್ಟು ; ಯಾವ ಯಾವ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸಲಾಗಿದೆ ; (ಜಿಲ್ಲಾವಾರು ವಿವರಗಳೊಡನೆ)

(ಇ) ಸದರಿ ಕಾಮಗಾರಿಗಳಿಗೆ ಅನುಮೋದನೆ ನೀಡುವಲ್ಲಿ ಅನುಸರಿಸುವ ಮಾನದಂಡಗಳೇನು ;

(ಈ) ಸದರಿ ಲೆಕ್ಕಶೀರ್ಷಿಕೆಯಡಿ ತುಂಡು ಗುತ್ತಿಗೆ ನೀಡಲು ಇಲಾಖೆಯಲ್ಲಿ ನಿಯಮಗಳನ್ನು ರೂಪಿಸಲಾಗಿದೆಯೇ ? (ವಿವರ ಸಲ್ಲಿಸುವುದು)

## ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸುವ ಬಗ್ಗೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೧೫೫ (೧೫೭೦) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಇತ್ತೀಚೆಗೆ ರೈತರು ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದನ್ನು ತಡೆಗಟ್ಟಲು ಸರಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಸರ್ಕಾರ ಕೈಗಾರಿಕೆಗೆ ಮಹತ್ವ ನೀಡುವಂತೆ ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸಲು ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ಪೂರ್ಣ ಮಾಹಿತಿ ಒದಗಿಸುವುದು ;

(ಇ) ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸಿದ್ದಲ್ಲಿ, ರೈತರು ನಗರಕ್ಕೆ ವಲಸೆ ಹೋಗುವುದನ್ನು ತಡೆಯಬಹುದಲ್ಲವೆ ;

(ಈ) ಸರ್ಕಾರ ಬೇಸಾಯ ಪದ್ಧತಿಯನ್ನು ಆಧುನಿಕ ಎಂದು ಪರಿಗಣಿಸಿರುವುದರಿಂದ ದೇಸಿ ತಳಿಗಳು ದಿನದಿಂದ ದಿನಕ್ಕೆ ನಾಶವಾಗಿ, ಕುಲಾಂತರ ತಳಿಗಳಿಗೆ ಹೆಚ್ಚು ಮಹತ್ವ ಸಿಗುತ್ತಿರುವುದು ನಿಜವೇ ; ನಿಜವಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಹಕಾರಿ ಬ್ಯಾಂಕಿನ ಅವ್ಯವಹಾರ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೫೬ (೧೩೧೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ The Grain Merchant Co-operative Bank Ltd.,ನ ಕಳೆದ ೨೦ ವರ್ಷಗಳ ಅವಧಿಯಲ್ಲಿನ ಆಡಳಿತ ಮಂಡಳಿಗಳು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬ್ಯಾಂಕಿನ ಷೇರುದಾರರಿಗೆ ಡಿವಿಡೆಂಡ್‌ನ್ನು ಸಕಾಲದಲ್ಲಿ ನೀಡದಿರುವುದು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನೋಟಿಸ್‌ಗಳನ್ನು ನೀಡಿರುವುದು, ಮತ್ತಿತರೆ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಗಮನಕ್ಕೆ ಬಾರದಿದ್ದಲ್ಲಿ, ಷೇರುದಾರರ ಹಿತಕಾಯಲು ಹಿಂದಿನ ಆಡಳಿತ ಮಂಡಳಿಗಳ ಅವ್ಯವಹಾರಗಳ ಬಗ್ಗೆ ಸಹಕಾರಿ ಕಾಯಿದೆಗಳಡಿ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ದಾವೆಗಳನ್ನು ಹೂಡುವುದೇ ;

(ಉ) ಈ ಬ್ಯಾಂಕಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಷೇರುದಾರರ ಸಂಖ್ಯೆ ವಿರಳವಾಗಿರುವುದು ಮತ್ತು ಆಡಳಿತ ಮಂಡಳಿಗಳು ಆ ಕೊರತೆಯನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ?

## ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಳಾಂತರದ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೭ (೧೩೭೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮಹಾನಗರದ ಪಾದಚಾರಿ ಮಾರ್ಗದ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ಎಲ್ಲಾ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು ಬೆಸ್ಕಾಂ ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಇ) ಬೆಸ್ಕಾಂ ಫುಟ್‌ಬಾತ್ ಮೇಲೆ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಲು ಕಾನೂನು ಬದ್ಧ ಹಕ್ಕು ಇದೆಯೇ ; (ವಿವರ ನೀಡುವುದು)

(ಈ) ಪಾದಚಾರಿ ಮಾರ್ಗದ ಮೇಲಿನ ಟ್ರಾನ್ಸ್‌ಫಾರ್ಮರ್‌ಗಳಿಂದ ಸಾರ್ವಜನಿಕರ ಜೀವ ಹಾಗೂ ಅವರ ರಕ್ಷಣೆಗೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು;

(ಉ) ಬೆಸ್ಕಾಂಗೆ ಪಾದಚಾರಿ ಮಾರ್ಗಗಳ ಮೇಲೆ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಪಾಲಿಕೆ ಯಾವ ನಿಯಮದಡಿ ಅನುಮತಿ ನೀಡಿದೆ ;

(ಊ) ಈ ಟ್ರಾನ್ಸ್‌ಫಾರ್ಮರ್‌ಗಳನ್ನು ಎಷ್ಟು ಅವಧಿಯಲ್ಲಿ ಸ್ಥಳಾಂತರಿಸಿ, ಸಾರ್ವಜನಿಕ ಜೀವ ಹಾಗೂ ರಕ್ಷಣೆಗೆ ಕ್ರಮ ಕೈಗೊಳ್ಳಲಾಗುವುದು ? (ವಿವರ ನೀಡುವುದು)

## ಕೇಂದ್ರ ರಸ್ತೆ ಅನುದಾನ ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೫೮ (೧೬೩೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ರಸ್ತೆ ಅನುದಾನ (C.R.F.) ಯೋಜನೆಯಡಿ ಈ ಬಾರಿ ರಾಜ್ಯಕ್ಕೆ ಮಂಜೂರಾದ ಅನುದಾನ ಎಷ್ಟು ; ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ಒದಗಿಸಲಾಗಿದೆ ; ಇದರಲ್ಲಿ ಬೆಳಗಾಂ ಜಿಲ್ಲೆಗೆ ಮಂಜೂರಾದ ಅನುದಾನವೆಷ್ಟು ;

(ಆ) ಈ ಯೋಜನೆಯಡಿ ಅನುದಾನ ಮಂಜೂರಾತಿಗೆ ಇರುವ ಮಾನದಂಡಗಳೇನು ?

## ಕೃಷಿ ಭಾಗ್ಯ ಯೋಜನೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)** –

೧೫೯ (೧೬೨೦) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗದಗ – ಬೆಟಗೇರಿ ಜಿಲ್ಲೆಯಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣ ಯೋಜನೆಯನ್ನು ಎಷ್ಟು ತಾಲ್ಲೂಕುಗಳಿಗೆ ಮಂಜೂರು ಮಾಡಲಾಗಿದೆ ; ಪ್ರತಿ ತಾಲ್ಲೂಕುಗಳಿಗೆ ನಿಗಧಿಪಡಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಆ) ಈ ಯೋಜನೆಗಾಗಿ ಗದಗ ಜಿಲ್ಲೆಗೆ ಮಂಜೂರಾದ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸಲಾಗಿದೆಯೇ ; ಒಳಪಡಿಸದೇ ಇದ್ದಲ್ಲಿ ಕಾರಣಗಳೇನು ? (ವಿವರ ನೀಡುವುದು)

## ವಿದ್ಯುತ್ ದರ ಏರಿಕೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು)** –

೧೬೦ (೧೬೪೧) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨ ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಬಾರಿ ವಿದ್ಯುತ್ ದರವನ್ನು ಏರಿಕೆ ಮಾಡಲಾಗಿದೆ ; ಏರಿಕೆಯಾಗಿರುವ ದರ ಎಷ್ಟು ;

(ಆ) ಪದೇ ಪದೇ ವಿದ್ಯುತ್ ದರ ಏರಿಕೆಯಿಂದಾಗಿ ರಾಜ್ಯದ ಜನತೆಗೆ ಹೆಚ್ಚಿನ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರ ಯಾವುದಾದರೂ ಯೋಜನೆ ರೂಪಿಸಿದೆಯೇ ;

(ಈ) ಕಳೆದ ಒಂದು ವರ್ಷದಿಂದ ವಿದ್ಯುತ್ ಅವಘಡಗಳಿಂದ ಮೃತಪಟ್ಟ ನೌಕರರು ಮತ್ತು ಸಾರ್ವಜನಿಕರ ಸಂಖ್ಯೆ ಎಷ್ಟು ;

(ಉ) ಈ ರೀತಿಯ ಮೃತಪಟ್ಟ ಅವಲಂಬಿತರಿಗೆ ಇಲಾಖಾ ವತಿಯಿದ ನೀಡಿರುವ ಪರಿಹಾರ ಎಷ್ಟು ಹಾಗೂ ಅಂತಹ ಕುಟುಂಬಗಳಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ಕಲ್ಪಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ?

## ಮೈಸೂರು – ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಷಟ್ಪಥ ರಸ್ತೆ ನಿರ್ಮಾಣ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೧ (೧೫೪೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯನ್ನು ಷಟ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾಪನೆ ಸರ್ಕಾರದ ಮುಂದೆ ಎಂದಿನಿಂದ ಇದೆ ; ಈ ಬಗ್ಗೆ ಸರ್ಕಾರ ನೇಮಿಸಿದ್ದ ಖಾಸಗಿ ಸಲಹಾ ಸಂಸ್ಥೆಯು ವರದಿಯನ್ನು ಸಲ್ಲಿಸಿದೆಯೇ ; ಸದರಿ ವರದಿಯ ಮುಖ್ಯಾಂಶಗಳೇನು ; ವರದಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದ ಅತ್ಯಂತ ಪ್ರಮುಖ ರಸ್ತೆಯನ್ನು ವಿಸ್ತರಿಸುವ ವಿಚಾರದಲ್ಲಿ ಸರ್ಕಾರ ಇಷ್ಟೊಂದು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು ; ಈ ರಸ್ತೆಯನ್ನು ಯಾವಾಗ ವಿಸ್ತರಿಸಲಾಗುವುದು ;

(ಇ) ಈ ರಸ್ತೆಯ ವಿಸ್ತರಣೆಯ ಬದಲು ಮೈಸೂರಿನಿಂದ ಬೆಂಗಳೂರಿನವರೆಗೆ ಎಲಿವೇಟೆಡ್ ರಸ್ತೆಯ ನಿರ್ಮಾಣ ಮಾಡಬಹುದೆಂದು ಕೆಲವು ತಜ್ಞರು ಖಾಸಗಿಯಾಗಿ ಸಲಹೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ?

## ನಗರಾಭಿವೃದ್ಧಿ ಇಲಾಖೆಯ ಪುರಸಭೆ ಮತ್ತು ಸ್ಥಳೀಯ ಸಂಸ್ಥೆ ಪೌರ ಕಾರ್ಮಿಕರ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೨ (೧೬೫೫) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನಗರಾಭಿವೃದ್ಧಿ ಇಲಾಖೆ ಅಡಿಯಲ್ಲಿ ಬರುವ ಪುರಸಭೆ ಮತ್ತು ಸ್ಥಳೀಯ ಸಂಸ್ಥೆ, ಸಿ.ಎಮ್.ಸಿ., ಟಿ.ಎಂ.ಸಿ., ಮತ್ತು ಟಿ.ಎಸ್.ಪಿ.ಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು ;

(ಆ) ಜಿಲ್ಲಾವಾರು ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ; ಸದರಿ ಕಾರ್ಮಿಕರಿಗೆ ನೀಡುತ್ತಿರುವ ವೇತನ ಎಷ್ಟು ; (ವಿವರ ನೀಡುವುದು)

(ಇ) ಈ ಹಿಂದೆ ತಿಳಿಸಿರುವಂತೆ, ಪೌರ ಕಾರ್ಮಿಕರಿಗೆ ಸಮಾನ ಕೆಲಸ, ಸಮಾನ ವೇತನದ ಅಡಿಯಲ್ಲಿ ನೇರವಾಗಿ ವೇತನ ನೀಡಲಾಗುವುದೇ ; ಎಷ್ಟು ವೇತನ ನೀಡಲಾಗುವುದು ;

(ಈ) ಪೌರ ಕಾರ್ಮಿಕರ ಕಾನೂನಿನಂತೆ ಪಿಂಚಣಿ, ಪ್ರಾವಿಡೆಂಟ್ ಫಂಡ್, ವಿಮಾ ಸೌಲಭ್ಯ, ಸೇವಾ ಭದ್ರತೆ ಒದಗಿಸಲಾಗುವುದೇ ; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮ ಏನು ?

## ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಉತ್ಪಾದನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೬೩ (೧೬೩೨+೧೬೩೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಯಾವುವು; (ಕಂಪನಿಗಳ ವ್ಯಾಪ್ತಿಯ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ವಿದ್ಯುತ್ ಸರಬರಾಜು ಕಂಪನಿಗಳು ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಕೆ.ಪಿ.ಸಿ.ಎಲ್., ಹಾಗೂ ಖಾಸಗಿ ವಲಯದಿಂದ ಖರೀದಿ ಮಾಡಿದ ವಿದ್ಯುತ್ ಪ್ರಮಾಣ ಎಷ್ಟು ; (ಕಂಪನಿಗಳವಾರು ಮಾಹಿತಿ ನೀಡುವುದು)

(ಇ) ಸದರಿ ವಿದ್ಯುತ್ ಸರಬರಾಜು ಕಂಪನಿಗಳು ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಗ್ರಾಹಕರಿಗೆ ವಿತರಣೆ (ಮಾರಾಟ) ಮಾಡಿದ ಪ್ರಮಾಣ ಎಷ್ಟು ; (ಕಂಪನಿಗಳವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಸದರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ೨೦೧೩–೧೪, ೨೦೧೪–೧೫, ೨೦೧೫–೧೬ನೇ ಸಾಲಿನಲ್ಲಿ ಲೆಕ್ಕಕ್ಕೆ ಸಿಗದ ಹಾಗೂ ವಿತರಣೆಯಾದ, ನಷ್ಟ ಮತ್ತು ಕಳ್ಳತನದ ಪ್ರಮಾಣ ಎಷ್ಟು ; (ಕಂಪನಿವಾರು, ಜಿಲ್ಲಾವಾರು ವಿವರ ನೀಡುವುದು)

(ಉ) ವಿದ್ಯುತ್ ವಿತರಣೆಯ ನಷ್ಟಕ್ಕೆ ಕಾರಣಗಳೇನು ; ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ಸುಧಾರಣೆ ಕ್ರಮಗಳನ್ನು ಸರ್ಕಾರ ಕೈಗೊಳ್ಳದೇ ಇರುವುದು ನಷ್ಟಕ್ಕೆ ಮೂಲ ಕಾರಣವಿರುವುದು ನಿಜವೇ ; (ವಿದ್ಯುತ್ ಕಂಪನಿಗಳವಾರು ಹಾಗೂ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಊ) ಲೆಕ್ಕಕ್ಕೆ ಸಿಗದ ಹಾಗೂ ವಿತರಣೆಯ ನಷ್ಟ ಮತ್ತು ಕಳ್ಳತನದ ವಿದ್ಯುತ್ ಪ್ರಮಾಣದ ಹೊರೆಯನ್ನು ಸಾಮಾನ್ಯ ಗ್ರಾಹಕರ ಮೇಲೆ ಸರ್ಕಾರ ಹೇರುತ್ತಿರುವುದು ನ್ಯಾಯಸಮ್ಮತವೇ ; ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ?

## ಸಕ್ಕರೆ ಕಾರ್ಖಾನೆ ಮಾಲೀಕರಿಂದ ರೈತರಿಗೆ ಹಣ ಸಂದಾಯವಾಗದಿರುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೬೪ (೧೫೮೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೨೦೧೪ರಲ್ಲಿ ಸರ್ಕಾರವು ಸಕ್ಕರೆ ಕಾರ್ಖಾನೆಯವರು ಪ್ರತಿ ಟನ್ನಿಗೆ ಎಷ್ಟು ಹಣ ಸಂದಾಯ ಮಾಡಬೇಕೆಂದು ನಿಗದಿಪಡಿಸಿತ್ತು ;

(ಆ) ಈ ವರ್ಷ ಸರ್ಕಾರವು ಸಕ್ಕರೆ ಕಾರ್ಖಾನೆಯವರು ಪ್ರತಿ ಟನ್‌ಗೆ ಎಷ್ಟು ಹಣ ಸಂದಾಯ ಮಾಡಬೇಕು ಎಂದು ನಿರ್ಣಯಿಸಲಾಗಿದೆ ; ಈ ವರ್ಷ ಯಾವ–ಯಾವ ಕಾರ್ಖಾನೆಯವರು ರೈತರಿಗೆ ಪ್ರತಿ ಟನ್‌ಗೆ ಎಷ್ಟು ಹಣ ಸಂದಾಯ ಮಾಡಿರುವರು ; (ವಿವರ ನೀಡುವುದು)

(ಇ) ಕಳೆದ ವರ್ಷ ಎಷ್ಟು ಸಕ್ಕರೆ ಕಾರ್ಖಾನೆಗಳು ಸರ್ಕಾರದ ಆದೇಶದ ಪ್ರಕಾರ ಹಣ ಸಂದಾಯ ಮಾಡಿವೆ ; ಹಾಗೂ ಯಾವ ಕಾರ್ಖಾನೆಗಳು ಸರ್ಕಾರದ ಆದೇಶದ ಪ್ರಕಾರ ಹಣ ಸಂದಾಯ ಮಾಡಿರುವುದಿಲ್ಲ ; (ಕಾರ್ಖಾನೆಗಳ ಹೆಸರು, ವಿಳಾಸ ನೀಡುವುದು)

(ಈ) ಸಕ್ಕರೆ ಕಾರ್ಖಾನೆಗೆ ಕಬ್ಬು ಕಳುಹಿಸಿದ ಎಷ್ಟು ದಿನಗಳೊಳಗಾಗಿ ರೈತರಿಗೆ ಕಾರ್ಖಾನೆಯವರು ಹಣ ಕೊಡಬೇಕು ;

(ಉ) ಒಂದು ವೇಳೆ ಹಣ ಕೊಡದೇ ಇದ್ದಲ್ಲಿ, ರೈತರು ಯಾವ ಅಧಿಕಾರಿಗಳಿಗೆ ಹಣ ಕೊಡದಿರುವ ಬಗ್ಗೆ ದೂರು ನೀಡಬೇಕು ; ನಿಯಮಗಳ ಪ್ರಕಾರ ಬಾಕಿ ಹಣವನ್ನು ಯಾರು ವಸೂಲಿ ಮಾಡಿ ರೈತರಿಗೆ ನೀಡುತ್ತಾರೆ ;

(ಊ) ಸಕ್ಕರೆ ನಿರ್ದೇಶಕರು ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಒಂದು ವರ್ಷದಲ್ಲಿ ಅನಿರೀಕ್ಷಿತ ಭೇಟಿ ನೀಡಿರುವರು ; ಹಾಗೂ ತಪ್ಪಿತಸ್ಥ ಯಾವ–ಯಾವ ಕಾರ್ಖಾನೆಗಳ ಮೇಲೆ ಕ್ರಮ ಕೈಗೊಂಡಿರುವರು ? (ವಿವರ ನೀಡುವುದು)

## ಜಿಲ್ಲೆಯಲ್ಲಿ ಉಂಟಾಗುತ್ತಿರುವ ವಿದ್ಯುತ್ ವ್ಯತ್ಯಯ ಕುರಿತು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೫ (೧೬೯೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ವಿದ್ಯುತ್ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರ ಯಾವ ಯಾವ ರೀತಿಯ ಮಾರ್ಗೋಪಾಯಗಳನ್ನು ಅನುಸರಿಸುತ್ತಿದೆ ;

(ಆ) ವಿದ್ಯುತ್ ಅಭಾವವನ್ನು ನೀಗಿಸಲು ಯಾವ ಯಾವ ರಾಜ್ಯಗಳಿಂದ ಎಷ್ಟೆಷ್ಟು ಪ್ರಮಾಣದಲ್ಲಿ ಹಾಗೂ ಯಾವ ಯಾವ ದರಗಳಲ್ಲಿ ಖರೀದಿಸಲಾಗುತ್ತದೆ ; (ಅವುಗಳಿಗೆ ತಗುಲುವ ಒಟ್ಟು ವೆಚ್ಚದ ವಿವರ ಒದಗಿಸುವುದು)

(ಇ) ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ವಿದ್ಯುತ್‌ನ್ನು ಅವಲಂಬಿಸಿದ್ದು, ರಾಜ್ಯದಲ್ಲಿ ಕೃಷಿ ಚಟುವಟಿಕೆಗೆ ಬಳಕೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು ; ಗೃಹ ಬಳಕೆಗೆ, ಔದ್ಯೋಗಿಕರಣ ಹಾಗೂ ಇತರೇ ಚಟುವಟಿಕೆಗಳಿಗೆ ಬಳಕೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು ;

(ಈ) ಗ್ರಾಮೀಣ ಪ್ರದೇಶಗಳಲ್ಲಿ ಒಂದು ದಿನದ ಬಳಕೆಗೆ ಬೇಕಾಗಿರುವ ವಿದ್ಯುತ್ ಪ್ರಮಾಣ ಎಷ್ಟು ; ಎಷ್ಟು ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ ;

(ಉ) ಕಳೆದ ವರ್ಷ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸಬ್–ಸ್ಟೇಷನ್‌ಗಳನ್ನು ನಿರ್ಮಿಸಲಾಗಿದೆ ; ಎಷ್ಟು ಟ್ರಾನ್ಸ್‌ಫಾರ್ಮರ್ (ವಿದ್ಯುತ್ ಪರಿವರ್ತಕ)ಗಳನ್ನು ಖರೀದಿಸಲಾಗಿದೆ ? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. 1209, ಪ್ರತಿಗಳು 1500